**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಗುಂಡ್ಲುಪೇಟೆ**

**ಸಿಸಿ ನಂಃ 44/2020**

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ಮಹೇಶ | ಪ್ರಮಾಣ ಮಾಡಿದ<br>ದಿನಾಂಕಃ 07.03.2022 |
| ತಂದೆ ಹೆಸರು | ಶ್ರೀ ಶಿವಣ್ಣ | |
| ವಯಸ್ಸು | 55 ವರ್ಷ | |
| ವೃತ್ತಿ | ವ್ಯವಸಾಯ | ಚಾಸಾಃ 4 |
| ವಾಸಸ್ಥಳ | ಮಾಡ್ರಹಳ್ಳಿ ಗ್ರಾಮ<br>ಗುಂಡ್ಲುಪೇಟೆ ತಾಲ್ಲೂಕು | ಪ್ರಾಸಾಃ 4 |

**ದಿನಾಂಕಃ 07.03.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ-**

ನನಗೆ ಆರೋಪಿತರ ಪರಿಚಯ ಇಲ್ಲ. ಚಾಸಾ1,3 ರವರ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಯಾವುದೇ ವಿಚಾರ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ನನ್ನ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಗಿದೆ)**

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 14.10.2019 ರಂದ ಬೆ 7.30 ಗಂಟೆಯಲ್ಲಿ ಗರಗನಹಳ್ಳಿ ಗೇಟ್ ಹತ್ತಿರ ಹಾದುಹೋಗಿರುವ ಗುಂಡ್ಲುಪೇಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಘವಾಪುರ ಗ್ರಾಮದ ಪಾಪಣ್ಣ ರವರು ತಮ್ಮ ಬಾಬ್ತು ಕೆಎ-53-ಜೆ-340 ರ ಟಿವಿಎಸ್ ಸ್ಟಾರ್ ಸಿಟಿ ಮೊಪೈಡ್ ಸೈಕಲ್

ನಲ್ಲಿ  ತಮ್ಮ ಹೆಂಡತಿ ಪುಟ್ಟಸಿದ್ದಮ್ಮ ರವರನ್ನು ಕೂರಿಸಿಕೊಂಡು  ಗರಗನಹಳ್ಳಿ ಗ್ರಾಮದ ಕಡೆಗೆ ಬರುತ್ತಿದ್ದಾಗ ಆರೋಪಿಯು ಕೆಎಲ್-65-ಎಲ್-6302 ರ ಹುಂಡೈ ಗ್ರೆಂಡ್ ಐಟೆನ್ ಕಾರನ್ನು ಬೇಗೂರು ಕಡೆಯಿಂದ ಗುಂಡ್ಲುಪೇಟೆ ಕಡೆಗೆ ಅತೀವೇಗವಾಗಿ ಅಜಾಗರೂಕತೆಯಿಂದ ಮತ್ತು ಅಪಾಯಕಾರಿ ರೀತಿಯಲ್ಲಿ ಚಾಲನೆ ಮಾಡಿಕೊಂಡು ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಡಿಕ್ಕಿ ಪಡಿಸಿದ ಪರಿಣಾಮ ಪಾಪಣ್ಣ ಮತ್ತು ಪುಟ್ಟಸಿದ್ದಮ್ಮ ರವರಿಗೆ ತೀವ್ರ ರಕ್ತ ಗಾಯವಾಗಿ ಪುಟ್ಟಸಿದ್ದಮ್ಮರವರು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ.

ಈ ವಿಚಾರವಾಗಿ ಪೊಲೀಸರ ಮುಂದೆ ದಿಃ 18.10.2019 ರಂದು ಈಗ ಓದಿ ಹೇಳಿದಂತೆ 14.10.2019 ರಂದು ............................. ನೋಡಿದರೆ ಗುರುತಿಸುತ್ತೇನೆ ಎಂದು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲೆಗೆಳೆದ ಹೇಳಿಕೆ ಭಾಗವನ್ನು ನಿಪಿ7 ಎಂದು ಗುರುತಿಸಲಾಯಿತು.

ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u>:  ಆರೋಪಿ ಪರ ವಕೀಲರಿಂದ ಇರುವುದಿಲ್ಲ:**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**